## ರಕ್ತದಾನ ಶ್ರೇಷ್ಠದಾನ : ಡಾ.ಮಹಾಂತೇಶ ಕಡಪಟ್ಟಿ

ಹುನಗುಂದ: ಲಿಂ.ಮ.ನಿ.ಪ್ರ.ಡಾ.ಮಹಾಂತ ಸ್ವಾಮಿಗಳು ಚಿತ್ತರಗಿ ಸಂಸ್ಥಾನ ಮಠ ಇಲಕಲ್ ಇವರ ಜನ್ಮದಿನೋತ್ಸವದ ಹಾಗೂ ರಾಜ್ಯ ವ್ಯಸನಮುಕ್ತ ದಿನಾಚರಣೆ ಹಾಗೂ ಬೃಹತ್ ರಕ್ತದಾನ ಶಿಬಿರದ ಪೂರ್ವಭಾವಿಯಾಗಿ ವಿದ್ಯಾರ್ಥಿಗಳಲ್ಲಿ ರಕ್ತದಾನದ ಮಹತ್ವ ಕುರಿತು ತಿಳಿಸುವ ಉಪನ್ಯಾಸ ಕಾರ್ಯಕ್ರಮವನ್ನು ಮಹಾವಿದ್ಯಾಲಯದ ರೆಡ್‌ಕ್ರಾಸ್, ಎನ್.ಎಸ್.ಎಸ್, ಹಾಗೂ ಎನ್.ಸಿ.ಸಿ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ.ಮಹಾಂತೇಶ ಕಡಪಟ್ಟಿಯವರು ರಕ್ತದಾನವು ಎಲ್ಲಾ ದಾನಗಳಲ್ಲಿ ಶ್ರೇಷ್ಠದಾನವಾಗಿದ್ದು, ವಿದ್ಯಾರ್ಥಿಗಳು ರಕ್ತದಾನ ಮಾಡಿ ರೋಗಿಗಳ ಜೀವನ ಉಳಿಸಲು ನೆರವಾಗಬೇಕೆಂದು ಕರೆನೀಡಿದರು. ಮತ್ತೊಬ್ಬ ಅತಿಥಿಗಳಾದ ಡಾ.ಶ್ರೀಕಾಂತ ಸಾಕಾ ಅವರು ರಕ್ತದಾನದ ಮೂಲಕ ಸದೃಢವಾದ ದೇಹವನ್ನು ಕಾಪಾಡಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ ವಿ.ಮ.ವಿ.ವ ಸಂಘದ ನಿರ್ದೇಶಕರಾದ ಶ್ರೀ.ಎಂ.ಎನ್.ತೆನಿಹಳ್ಳಿಯವರು ವಿದ್ಯಾರ್ಥಿಗಳು ಮಾನಸಿಕವಾಗಿ ಸದೃಢವಾಗಬೇಕಾದರೆ ಸದೃಢ ದೇಹ ಅವಶ್ಯ, ಸದೃಢವಾದ ದೇಹವನ್ನು ಕಾಪಾಡಿಕೊಳ್ಳಲು ರಕ್ತದಾನ ಅವಶ್ಯವೆಂದರು. ಇದೊಂದು ಮಾನವೀಯತೆಯಿಂದ ಕೂಡಿದ ಅತ್ಯಂತ ಶ್ರೇಷ್ಠ ಕರ್ತವ್ಯವಾಗಿದೆ ಎಂದರು. ವೇದಿಕೆಯ ಮೇಲೆ ವಿ.ಮ.ವಿ.ವ ಸಂಘದ ನಿರ್ದೇಶಕರಾದ ಶ್ರೀ.ವೀರಣ್ಣ ಚೆಟ್ಟೇರ, ಪ್ರಾಚಾರ್ಯರಾದ ಪ್ರೊ.ಶಶಿಕಲಾ ಮಠ, ಶ್ರೀ ಅರುಣ ದುದ್ಗಗಿ, ಬಸು ಹೊಸೂರ, ಪ್ರೊ.ಎಲ್.ಎನ್.ಕುಲಕರ್ಣಿ ಉಪಸ್ಥಿತರಿದ್ದರು. ರೆಡ್‌ಕ್ರಾಸ್ ಘಟಕದ ಸಂಚಾಲಕರಾದ ಪ್ರೊ.ಎಸ್.ಆರ್.ನಾಗಣ್ಣವರ, ಎನ್.ಎಸ್.ಎಸ್. ಅಧಿಕಾರಿಗಳಾದ ಡಾ.ತಿಪ್ಪೇಸ್ವಾಮಿ ಡಿ.ಎಸ್. ಉಪಸ್ಥಿತರಿದ್ದರು. ಕಾರ್ಯಕ್ರಮವು ಕುಮಾರಿ ಸವಿತಾಳ ಪ್ರಾರ್ಥನೆಯೊಂದಿಗೆ ಆರಂಭಿಸಲಾಯಿತು. ಪ್ರೊ.ಬಿ.ಎಸ್.ಹೊಸಮನಿ ವಂದಿಸಿದರು. ಪವಿತ್ರಾ ದರಗದ ನಿರೂಪಿಸಿದರು.




Coordinator
IQAC
Vijaya Mahantesh Krupapohit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

PRINCIPAL 31/7/19
Vijaya Mahantesh Krupaposhit
S.R.Vastrad Arts, Science And Vijay
Shankarappa Bellihal Commerce College
Hungund-587118 (Dist:Bagalkot-Karnataka

Vastrad Art,Science And V.S.Bellihal Commerce College Hungund

Scanned with AltaScanner

**ಶ್ರದ್ಧೆಯಿಂದ ಓದಿದರೆ ಯಶಸ್ಸು ಸಾಧ್ಯ : ಶ್ರೀ ಎಸ್.ವ್ಹಿ.ಕಾರಿಕಲ್**

ಹುನಗುಂದ: ದಿನಾಂಕ 30.07.2019ರಂದು ವಿದ್ಯಾರ್ಥಿಗಳು ಅತ್ಯಂತ ಶ್ರದ್ಧೆಯಿಂದ ಅಭ್ಯಸಿಸಿದರೆ ಜೀವನದಲ್ಲಿ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ಜೀವಿನಮಟ್ಟಿ ಪ್ರೌಢಶಾಲೆ ಮುಖ್ಯೋಪಾಧ್ಯಾಯರಾದ ಹಾಗೂ ಮಹಾವಿದ್ಯಾಲಯದ ಹಳೆಯ ವಿದಾರ್ಥಿಯಾದ ಶ್ರೀ ಶರಣಪ್ಪ ವ್ಹಿ.ಕಾರಿಕಲ್ ಹೇಳಿದರು. ಪಟ್ಟಣದ ವಿ.ಎಂ.ಕೆ.ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ ಹಾಗೂ ಐಕ್ಯೂಎಸಿ ಘಟಕದ ಆಶ್ರಯದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳು ತಮ್ಮಲ್ಲಿ ಸದಾ ಧನಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳು ಹೇಗೆ ಪೂರ್ವ ತಯಾರಿಮಾಡಿಕೊಳ್ಳಬೇಕೆಂದು ಸವಿಸ್ತಾರವಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ಅವರನ್ನು ಮಹಾವಿದ್ಯಾಲಯದ ಪರವಾಗಿ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಪ್ರಾಚಾರ್ಯರಾದ ಪ್ರೊ.ಶಶಿಕಲಾ ಮಠ ಅವರು ವಿದ್ಯಾರ್ಥಿಗಳು ಮಹಾವಿದ್ಯಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ನಡೆಸಲಾಗುವ ತರಬೇತಿ ವರ್ಗಗಳಿಗೆ ಹಾಜರಾಗಿ ಪ್ರಯೋಜನ ಪಡೆದುಕೊಳ್ಳಬೇಕೆಂದು ಹೇಳಿದರು. ತರಬೇತಿ ವರ್ಗಗಳ ಸಂಚಾಲಕರಾದ ಪ್ರೊ.ಎಸ್.ಆರ್.ನಾಗಣ್ಣವರ ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಐಕ್ಯೂಎಸಿ ಸಂಯೋಜಕರಾದ ಡಾ.ಎಸ್.ಆರ್.ಗೋಲಗೊಂಡ ಅತಿಥಿಗಳನ್ನು ಪರಿಚಯಿಸಿದರು. ಕಾಲೇಜು ಒಕ್ಕೂಟದ ಕಾರ್ಯಾಧ್ಯಕ್ಷರಾದ ಪ್ರೊ.ಎಲ್.ಎನ್.ಕುಲಕರ್ಣಿ ಉಪಸ್ಥಿತರಿದ್ದರು. ಸವಿತಾ ಪ್ರಾರ್ಥನೆಗೈದರು. ಶಿಬಿರದ ಕಾರ್ಯದರ್ಶಿಯಾದ ಪ್ರೊ.ಬಿ.ಎಸ್.ಹೊಸಮನಿ ವಂದಿಸಿದರು. ಪವಿತ್ರಾ ದರಗದ ನಿರೂಪಿಸಿದರು.

**ರಕ್ತದಾನ ಶ್ರೇಷ್ಠದಾನ : ಡಾ.ಮಹಾಂತೇಶ ಕಡಪಟ್ಟಿ**

ಹುನಗುಂದ : ದಿನಾಂಕ : 31.07.2019 ಬುಧವಾರ ಲಿಂ.ಮ.ನಿ.ಪ್ರ.ಡಾ.ಮಹಾಂತ ಸ್ವಾಮಿಗಳು ಚಿತ್ತರಗಿ ಸಂಸ್ಥಾನ ಮಠ ಇಲಕಲ್ ಇವರ ಜನ್ಮದಿನೋತ್ಸವದ ಹಾಗೂ ರಾಜ್ಯ ವ್ಯಸನಮುಕ್ತ ದಿನಾಚರಣೆ ಹಾಗೂ ಬೃಹತ್ ರಕ್ತದಾನ ಶಿಬಿರದ ಪೂರ್ವಭಾವಿಯಾಗಿ ವಿದ್ಯಾರ್ಥಿಗಳಲ್ಲಿ ರಕ್ತದಾನದ ಮಹತ್ವ ಕುರಿತು ತಿಳಿಸುವ ಉಪನ್ಯಾಸ ಕಾರ್ಯಕ್ರಮವನ್ನು ಮಹಾವಿದ್ಯಾಲಯದ ರೆಡ್‌ಕ್ರಾಸ್, ಎನ್.ಎಸ್.ಎಸ್. ಹಾಗೂ ಎನ್.ಸಿ.ಸಿ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಡಾ.ಮಹಾಂತೇಶ ಕಡಪಟ್ಟಿಯವರು ರಕ್ತದಾನವು ಎಲ್ಲಾ ದಾನಗಳಲ್ಲಿ ಶ್ರೇಷ್ಠದಾನವಾಗಿದ್ದು, ವಿದ್ಯಾರ್ಥಿಗಳು ರಕ್ತದಾನ ಮಾಡಿ ರೋಗಿಗಳ ಜೀವನ ಉಳಿಸಲು ನೆರವಾಗಬೇಕೆಂದು ಕರೆನೀಡಿದರು. ಮತ್ತೊಬ್ಬ ಅತಿಥಿಗಳಾದ ಡಾ.ಶ್ರೀಕಾಂತ ಸಾಕಾ ಅವರು ರಕ್ತದಾನದ ಮೂಲಕ ಸದೃಢವಾದ ದೇಹವನ್ನು ಕಾಪಾಡಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ ವಿ.ಮ.ವಿ.ವ ಸಂಘದ ನಿರ್ದೇಶಕರಾದ ಶ್ರೀ.ಎಂ.ಎನ್.ತೆನಿಹಳ್ಳಿಯವರು ವಿದ್ಯಾರ್ಥಿಗಳು ಮಾನಸಿಕವಾಗಿ ಸದೃಢವಾಗಬೇಕಾದರೆ ಸದೃಢ ದೇಹ ಅವಶ್ಯ, ಸದೃಢವಾದ ದೇಹವನ್ನು ಕಾಪಾಡಿಕೊಳ್ಳಲು ರಕ್ತದಾನ ಅವಶ್ಯವೆಂದರು. ಇದೊಂದು ಮಾನವೀಯತೆಯಿಂದ ಕೂಡಿದ ಅತ್ಯಂತ ಶ್ರೇಷ್ಠ ಕರ್ತವ್ಯವಾಗಿದೆ ಎಂದರು. ವೇದಿಕೆಯ ಮೇಲೆ ವಿ.ಮ.ವಿ.ವ ಸಂಘದ ನಿರ್ದೇಶಕರಾದ ಶ್ರೀ.ವೀರಣ್ಣ ಚೆಟ್ಟೇರ, ಪ್ರಾಚಾರ್ಯರಾದ ಪ್ರೊ.ಶಶಿಕಲಾ ಮಠ, ಶ್ರೀ ಅರುಣ ದುದ್ಗಿ, ಬಸು ಹೊಸೂರ, ಪ್ರೊ.ಎಲ್.ಎನ್.ಕುಲಕರ್ಣಿ ಉಪಸ್ಥಿತರಿದ್ದರು. ರೆಡ್‌ಕ್ರಾಸ್ ಘಟಕದ ಸಂಚಾಲಕರಾದ ಪ್ರೊ.ಎಸ್.ಆರ್.ನಾಗಣ್ಣವರ, ಎನ್.ಎಸ್.ಎಸ್. ಅಧಿಕಾರಿಗಳಾದ ಡಾ.ಶಿವ್ಹೇಸ್ವಾಮಿ ಡಿ.ಎಸ್. ಉಪಸ್ಥಿತರಿದ್ದರು. ಕಾರ್ಯಕ್ರಮವು ಕುಮಾರಿ ಸವಿತಾಳ ಪ್ರಾರ್ಥನೆಯೊಂದಿಗೆ ಆರಂಭಿಸಲಾಯಿತು. ಪ್ರೊ.ಬಿ.ಎಸ್.ಹೊಸಮನಿ ವಂದಿಸಿದರು. ಪವಿತ್ರಾ ದರಗದ ನಿರೂಪಿಸಿದರು.

Coordinator
IQAC
Vijaya Mahantesh Krupapohit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

PRINCIPAL
Vijaya Mahantesh Krupaposhit
S.R.Vastrad Arts, Science And Vijay
Shankarappa Bellihal Commerce College
Hungund-587118

Scanned with AltaScanner